
ಒಂದಾಣೆ ಮಾಲೆ **24**

ಭಾರತದ ಮಹಾನಗರಗಳು

(ಲೇ. ಶ್ರೀ। ಟಿ. ಚಂದ್ರರಾಜ ಸೆಟ್ಟಿ, ಸಿದ್ಧಕಟ್ಟೆ) [ದ್ವಿತೀಯ ಭಾಗ]



1955 ಬೆಲೆ ಆಣೆ ೧.

ಒಂದಾಣೆ ಮಾಲೆ — ಮಂಗಳೂರು.

ಭಾರತದ ಮಹಾನಗರಗಳು

[ದ್ವಿತೀಯ ಭಾಗ.]

ಢಿಲ್ಲಿ

ಪ್ರಾಚೀನ ಕಾಲದಿಂದಲೂ ಹಲವು ರಾಜರ ರಾಜಧಾನಿಯಾಗಿ ಮೆರೆಯುವ ಭಾಗ್ಯವು ಢಿಲ್ಲಿಯದಾಗಿದೆ.

ಭಾರತದ ರಾಜಧಾನಿಯನ್ನು ಕಲ್ಕತ್ತೆಯಿಂದ ಢಿಲ್ಲಿಗೆ ವರ್ಗಾಯಿಸಿದ ಮೇಲೆ ನಗರವು ನಾಲ್ಕು ನಿಟ್ಟಿನಲ್ಲಿ ಬೆಳೆದು ಬಂದು ಭಾರತದ ಮಹಾನಗರಗಳಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಹಳೆ ಢಿಲ್ಲಿಯ ಸಮೀಪದಲ್ಲಿ ಸುಮಾರು ೨೫ ಕೋಟಿ ರೂಪಾಯಿಗಳ ವೆಚ್ಚದಿಂದ ಹೊಸ ಢಿಲ್ಲಿಯನ್ನು ನಿರ್ಮಿಸಿದ್ದಾರೆ. ಪಾಶ್ಚಾತ್ಯ ಮಹಾನಗರಗಳ ರಚನೆಯಂತೆ ವಿಶಾಲವಾದ ರಸ್ತೆಗಳಿಂದಲೂ ಭವ್ಯವಾದ ಮಂದಿರಗಳಿಂದಲೂ ಇದನ್ನು ನಿರ್ಮಿಸಿರುವುದರಿಂದ ಈ ನಗರವು ಶಾಂತಿ–ನೈರ್ಮಲ್ಯಗಳಿಂದ ಕೂಡಿದೆ. ಹಳೆ ಢಿಲ್ಲಿ, ಹೊಸ ಢಿಲ್ಲಿ ಮತ್ತು ಅದರ ಸುತ್ತು ಮುತ್ತಲಿನ ಜನಸಂಖ್ಯೆಯು ಸುಮಾರು ೧೫ ಲಕ್ಷದಷ್ಟಿದೆ.

ಹೊಸ ಮತ್ತು ಹಳೆಯ ಢಿಲ್ಲಿಯ ನೋಟವನ್ನು ನೋಡಲು ಒಂದು ವಾರವಾದರೂ ಬೇಕು. ಭವ್ಯವಾದ ಸರಕಾರಿ ಕಚೇರಿಗಳು, ಸುಂದರವಾದ ನ್ಯಾಯವಿಧಾಯಕ ಸಭಾಸದನ, ಜಗತ್ತಿನ ಅತಿ ದೊಡ್ಡ ಮಸೀದಿಗಳಲ್ಲೊಂದಾದ ಜುಮ್ಮಾ ಮಸೀದಿ, 'ಭೂಲೋಕದ ಸ್ವರ್ಗ'ವೆಂದೆನಿಸುವ 'ದಿವಾನಿಖಾಸ್' ಎಂಬ ಮೊಗಲ ಸಾಮ್ರಾಟರ ದರ್ಬಾರು ಸದನ, ಹುಮಾಯೂನನ ಗೋರಿ, ಅಶೋಕನ ಕಲ್ಲುಕಂಭ, ಬಿರ್ಲಾ ಮಂದಿರ, ಕೋಟೆ ಮೊದಲಾದ ನೋಡತಕ್ಕ ಹಲವು ಸ್ಥಳಗಳಿವೆ.

ಢಿಲ್ಲಿಯ ಕೆಂಪು ಕೋಟೆಯ ಹೆಸರನ್ನು ಕೇಳದವರಿಲ್ಲ. ಈ ಕೋಟೆಯು ೩೦೦೦ ಅಡಿ ಉದ್ದವಾಗಿಯೂ ೧೮೦೦ ಅಡಿ ಅಗಲವಾಗಿಯೂ ಇರುವ ೧೦೦ ಅಡಿ ಎತ್ತರವಾದ ಕೆಂಪು ಕಲ್ಲಿನಿಂದ ಕಟ್ಟಿದ ಪ್ರಾಕಾರವಾಗಿದೆ. ತಾಜಮಹಲನ್ನು ಕಟ್ಟಿಸಿದ ಷಹಜಾನನು ಈ ಕೋಟೆಯನ್ನು ೧೬೩೮–೪೮ರಲ್ಲಿ ಕಟ್ಟಿಸಿದನು. ಈ ಕೋಟೆಯೊಳಗೆ ದಿವಾನಿ ಆಮ್, ದಿವಾನಿಖಾಸ್,

ರಂಗಮಹಲ್, ಮೋತಿ ಮಸೀದಿ ಮೊದಲಾದ ಹಲವು ದೊಡ್ಡ ಮಹಲುಗಳಿವೆ.

ಕೆಂಪು ಕೋಟೆಯ ಪಶ್ಚಿಮಕ್ಕೆ ಷಹಜಾನನಿಂದ ಕಟ್ಟಿಸಲ್ಪಟ್ಟ ಇಡೀ ಜಗತ್ತಿನಲ್ಲೇ ದೊಡ್ಡದಾದ ಕೆಂಪು ಮತ್ತು ಬಿಳಿ ಕಲ್ಲುಗಳ ರಚನೆಯಿಂದಾದ ಜುಮ್ಮಾ ಮಸೀದಿಯಿದೆ. ಅದರ ಎತ್ತರವಾದ—ಭವ್ಯವಾದ ಗುಮಟ ವನ್ನು ಬಹುದೂರದಿಂದ ಗುರುತಿಸಬಹುದು.

ಹಿಂದಿನ ಕಾಲದಲ್ಲಿ ಜಗತ್ತಿನಲ್ಲಿಯೇ ದೊಡ್ಡದಾದ ವ್ಯಾಪಾರ ಕೇಂದ್ರ ವೆಂದು ಪ್ರಸಿದ್ಧಿಯನ್ನು ಪಡೆದಿದ್ದ (ಹಾಗೂ; ಸಿಕ್ಖರ ಗುರುವಾಗಿದ್ದ ಗುರು ಗೋವಿಂದ ಸಿಂಘನ ಆತ್ಮಬಲಿಯ ಸ್ಮಾರಕವಾಗಿರುವ) ಚಾಂದನೀ ಚೌಕವು ಹಳೆ ಢಿಲ್ಲಿಯ ಮಧ್ಯದಲ್ಲಿದೆ. ಈಗಲೂ ದಿನ ಒಂದಕ್ಕೆ ಮಿಲಿಯಗಟ್ಟಲೆ ರೂಪಾಯಿಗಳ ವಹಿವಾಟು ಇಲ್ಲಿ ನಡೆಯುತ್ತಿರುತ್ತದೆ. ಮತ್ತು ಈ ರಸ್ತೆಯು ಭಾರತದಲ್ಲೇ ಹೆಸರಾದ ಸ್ಥಳವಾಗಿದೆ.

ನವದೆಹಲಿಯು ಭಾರತದ ರಾಜಧಾನಿಯಾದ ನವೀನ ನಗರ. ಅದರ ಅಗಲವಾದ ರಸ್ತೆಗಳನ್ನೂ, ಸರಕಾರದ ಹಲವು ಇಲಾಖೆಗಳ ಭವ್ಯವಾದ ಕಟ್ಟಡಗಳನ್ನೂ ನೋಡಲು ಎರಡು ಕಣ್ಣುಗಳು ಸಾಲವು. ಸೆಕ್ರಟರಿಯೇಟ್, ವೃತ್ತಾಕಾರದ ಕೌನ್ಸಿಲ್ ಚೇಂಬರ್, ಬ್ರಾಡ್‌ಕಾಸ್ಟಿಂಗ್ ಹೌಸ್, ಮೊದಲಾದವುಗಳನ್ನೂ, ಅವುಗಳಿಂದ ಸ್ವಲ್ಪ ಮುಂದಕ್ಕೆ ಜಯಪುರದ ಮಹಾರಾಜನಾದ ಜಯಸಿಂಗ ಎಂಬವನಿಂದ ೩೦೦ ವರ್ಷಗಳ ಮೊದಲು ಕಟ್ಟಿಸಲ್ಪಟ್ಟ 'ಜಂತರ್ ಮಂತರ್' ಎಂದು ಕರೆಯಲ್ಪಡುವ ನಿರೀಕ್ಷಣಾಲಯ (Observatory)ವನ್ನೂ ನೋಡಲೇಬೇಕು.

ನವ ಢಿಲ್ಲಿಯೆಲ್ಲವನ್ನೂ ನೋಡಿದ ಮೇಲೆ 'ಲಕ್ಷ್ಮೀನಾರಾಯಣ' ದೇವಸ್ಥಾನವನ್ನು ನೋಡಲು ಮರೆಯಬಾರದು. ಇದಕ್ಕೆ ಬಿರ್ಲಾ ಮಂದಿರವೆನ್ನುವರು. ಇಪ್ಪತ್ತನೆಯ ಶತಮಾನದ ಶಿಲ್ಪದ ಉತ್ತಮ ನಿದರ್ಶನವು ಈ ಮಂದಿರ.

ಹೊಸ ಢಿಲ್ಲಿಯಿಂದ ಸುಮಾರು ಹನ್ನೊಂದು ಮೈಲುಗಳ ದೂರದಲ್ಲಿರುವ ಕುತುಬ್ ಮಿನಾರವೆಂಬ ೨೪೦ ಅಡಿ ಎತ್ತರವಾದ ಗೋಪುರವು ನೋಡತಕ್ಕದ್ದಿದೆ. ಇದು ಜಗತ್ತಿನಲ್ಲೆಲ್ಲ ಅತ್ಯುಚ್ಛವಾದ ಅಖಂಡ ಗೋಪುರ ವೆಂದು ಪರಿಗಣಿಸಲ್ಪಟ್ಟಿದೆ. ಇದನ್ನು ಏರಲು ೩೭೯ ಮೆಟ್ಟಲುಗಳಿವೆ. ಈ ಸ್ತಂಭವು ಬುಡದಲ್ಲಿ ೪೭ ಅಡಿ ಅಗಲವಾಗಿದ್ದು ಮೇಲೆ ಹೋದಂತೆ

ಸಪುರವಾಗುತ್ತ ಬಂದು ತುದಿಯಲ್ಲಿ ಒಂಭತ್ತು ಅಡಿ ಅಗಲವಿದೆ. ಇದನ್ನು ೧೧೯೯ರಲ್ಲಿ ಕುತುಬುದ್ದೀನನೆಂಬವನು ತನ್ನ ವಿಜಯಸ್ತಂಭವೆಂದು ಕಟ್ಟಿಸಲು ಪ್ರಾರಂಭಿಸಿದರೂ, ೧೨೨೦ರಲ್ಲಿ ಅಲ್ತಮುಷನೆಂಬವನು ಪೂರೈಸಿದನೆಂದು ಪ್ರತೀತಿಯಿದೆ. ಈ ಮಹಾಸ್ತಂಭದ ಮೇಲೆ ಪ್ರಕೃತಿ ಪ್ರಕೋಪದ ಆಘಾತಗಳೂ ಅನೇಕ ಬಿದ್ದಿವೆ. ಫಿರೋಜಷಹ ತಗಲಖನ ಆಳ್ವಿಕೆಯಲ್ಲಿ ಭೂಕಂಪದಿಂದ ಇದರ ತುತ್ತತುದಿಯ ಎರಡು ಅಟ್ಟಳಿಗೆಗಳು ಹಾಳಾದುವು. ಅವುಗಳನ್ನು ೧೫೦೫ರಲ್ಲಿ ಸಿಕಂದರ ಲೋಡಿಯು ಸರಿಪಡಿಸಿದನು. ಪುನಃ ೧೭೯೪ರಲ್ಲಿ ಅದಕ್ಕೆ ಧಕ್ಕೆಯಾದಾಗ ಮೇಜರ್ ಸ್ಮಿತ್ ಎಂಬ ಬ್ರಿಟಿಷ್ ಎಂಜಿನಿಯರನು ಅದನ್ನು ಸರಿಪಡಿಸಿದನು.

ಕುತುಬ್ ಮಿನಾರದ ಸಮೀಪ ೨೩ ಅಡಿ ಎತ್ತರವಾದ ಒಂದೇ ಎರಕದಿಂದ ಮಾಡಿದ ಕಬ್ಬಿಣದ ಸ್ತಂಭವಿದೆ. ಇದರ ಮೇಲೆ ಗುಪ್ತರ ಕಾಲದಲ್ಲಿ ಬರೆದ ಸಂಸ್ಕೃತ ಶ್ಲೋಕಗಳ ನಾಲ್ಕು ಸಾಲುಗಳಿವೆ. ಸಾಮ್ರಾಟ್ ಚಂದ್ರಗುಪ್ತ ವಿಕ್ರಮಾದಿತ್ಯನು ಈ ಸ್ತಂಭವನ್ನು ಸ್ಥಾಪಿಸಿದನೆಂದು ಪ್ರತೀತಿಯಿದೆ.

ಕುತುಬ ಮಿನಾರದ ಸುತ್ತಮುತ್ತಲೂ ನೋಡತಕ್ಕ ಹಲವು ಚಾರಿತ್ರಿಕ ಅವಶೇಷಗಳಿವೆ.

ಸಾವಿರಾರು ವರ್ಷಗಳ ಹಿಂದೆ ಪಾಂಡವರ ರಾಜಧಾನಿಯಾದ ಇಂದ್ರಪ್ರಸ್ಥವು ಡಿಲ್ಲಿ ನಗರವಾಗಿದೆ. ಪೃಥ್ವಿರಾಜನು ಮಹಮ್ಮದ ಘೋರಿಯೊಡನೆ ಯುದ್ಧಕ್ಕೆ ಹೊರಟದ್ದು ಇಲ್ಲಿಂದ. ಪಠಾಣ ಸುಲ್ತಾನರೂ, ಮೊಗಲ ಸಾಮ್ರಾಟರೂ ಕಟ್ಟಿಸಿದ ಏಳು ಪುರಗಳು ಇಲ್ಲಿ ಹಾಳು ಬಿದ್ದಿವೆ.

ಡಿಲ್ಲಿಯು ಭಾರತದ ಮಧ್ಯದಲ್ಲಿದ್ದು ಹಲವು ರೈಲ್ವೆ ಮತ್ತು ವಿಮಾನಗಳ ಸಂಧಿ ಸ್ಥಳದಲ್ಲಿರುವುದರಿಂದ ಅದು ಇನ್ನೂ ಬಹುದೊಡ್ಡ ನಗರವಾಗಿ ಬೆಳೆದು ಬರುವುದರಲ್ಲಿ ಸಂದೇಹವಿಲ್ಲ. ಈ ನಗರವು ಹಲವು ಕೈಗಾರಿಕೆಗಳಿಗೆ ಕೇಂದ್ರವಾಗಿದ್ದು, ದಂತದ ಕೆತ್ತನೆಯ ಕೆಲಸಗಳಿಗಾಗಿಯೂ, ಜರಿಯ ಕೆಲಸಗಳಿಗಾಗಿಯೂ ಹೆಸರುವಾಸಿಯಾಗಿದೆ.

ಹೈದರಾಬಾದು

ಗೊಲ್ಕಂಡವನ್ನು ೧೫೮೦ರಿಂದ ೧೬೧೧ರ ವರೆಗೆ ಆಳಿಕೊಂಡಿದ್ದ ಮುಹಮ್ಮದ್ ಕ್ವೂಲಿ ಕುತುಬ್ ಷಹನೆಂಬ ನವಾಬನು ತನ್ನ ಪ್ರೀತಿಯ

ಹಿಂದೂ ರಮಣಿಯಾದ 'ಭಾಗಮತಿ' ಎಂಬವಳ ಸಲುವಾಗಿ ಹೈದರಾಬಾದು ನಗರವನ್ನು ನಿರ್ಮಿಸಿದನು. ಆಗ ಆ ನಗರಕ್ಕೆ 'ಭಾಗ ನಗರ'ವೆಂದು ಹೆಸರಿತ್ತು. ಆ ಸಾಮ್ರಾಟನು ತನ್ನ ಪ್ರಿಯಳನ್ನು ಕಾಣಲೋಸುಗ ಗೊಲ್ಕೊಂಡದಿಂದ ಭಾಗ ನಗರಕ್ಕೆ ಬರುವಾಗ ದಾರಿಯಲ್ಲಿ ಸಿಕ್ಕುವ ಹೊಳೆಗೆ ೧೫೯೩ರಲ್ಲಿ ಸೇತುವೆಯನ್ನು ಕಟ್ಟಿಸಿದನು. ಆ ಸೇತುವೆಯು ಈಗಲೂ ಪ್ರೇಕ್ಷಕರನ್ನು ಮುಗ್ಧಗೊಳಿಸುತ್ತಿರುವುದು. ಆ ಅರಸನು ಸತ್ತು ಹೋದ ಮೇಲೆ ಪಟ್ಟಕ್ಕೆ ಬಂದ ಅರಸನು ಮುಸಲ್ಮಾನರ ನಗರಕ್ಕೆ ಹಿಂದೂ ಹೆಸರಿರ ಬಾರದಾಗಿ ನೆನಸಿ 'ಕೇಸರಿಗಳ ನಗರ'ವೆಂದು ಅರ್ಥ ಬರುವ ಹೈದರಾಬಾದು ಎಂಬ ನಾಮಕರಣವನ್ನು ಮಾಡಿದನು. ಅಲ್ಲಿ ವಾಸಿಸುವ ಹಿಂದುಗಳಲ್ಲಿ ಕೆಲವರು ಈಗಲೂ ಅದನ್ನು ಭಾಗ ನಗರವೆನ್ನುವುದುಂಟು.

೧೭೨೪ರ ವರೆಗೆ ಹೈದರಾಬಾದು ಮೊಗಲರ ಆಳ್ವಿಕೆಗೊಳಪಟ್ಟಿತ್ತು. ಆ ಕಾಲದ ನವಾಬನಾದ ಆಸಫ್ ಜಾ ನಿಜಾಮು ಉಲ್ ಮುಲ್ಕನೆಂಬವನು ತಾನು ಸ್ವತಂತ್ರನೆಂದು ಘೋಷಿಸಿ ಹೈದರಾಬಾದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಅದನ್ನು ಬಹಳವಾಗಿ ಬೆಳೆಯಿಸಿದನು. ಭಾರತದ ಮಹಾನಗರಗಳಲ್ಲಿ ಹೈದರಾಬಾದು ಐದನೆಯದು. ಇಲ್ಲಿಯ ಜನಸಂಖ್ಯೆಯಲ್ಲಿ ಹೆಚ್ಚಿನವರು ಹಿಂದುಗಳಾಗಿದ್ದರೂ ಅರಸನು ಮುಸಲ್ಮಾನನಾಗಿದ್ದುದರಿಂದ ಮೊಗಲ್ ಶೈಲಿಯ ಹಲವು ಉತ್ತಮ ಕಟ್ಟಡಗಳನ್ನು ಇಲ್ಲಿ ಕಾಣಬಹುದು.

ಹೈದರಾಬಾದಿನಲ್ಲಿ ನೋಡತಕ್ಕ ಹಲವು ಸ್ಥಳಗಳಿವೆ. ಅವುಗಳಲ್ಲಿ ಚಾರ್‌ಮಿನಾರ್, ಉಸ್ಮಾನಿಯಾ ವಿಶ್ವವಿದ್ಯಾಲಯ, ನಿಜಾಂ ಜುಬ್ಲಿ ಹೋಲ್, ಯುನಾನಿ ಜನರಲ್ ಆಸ್ಪತ್ರೆ, ಉಸ್ಮಾನಿಯಾ ಜನರಲ್ ಆಸ್ಪತ್ರೆ, ನಿಜಾಮು ಸಾಗರ ಮೊದಲಾದವು ಮುಖ್ಯವಾದವು.

ಹೈದರಾಬಾದಿನ ಮಧ್ಯದಲ್ಲಿ ನಿಜಾಮನ (ರಾಜಪ್ರಮುಖ) ಅರಮನೆಯ ಎದುರಿಗೆ ಅನತಿ ದೂರದಲ್ಲಿ ನಾಲ್ಕು ದೊಡ್ಡ ರಸ್ತೆಗಳು ಸೇರುವಲ್ಲಿ ಇರುವ ಚಾರ್‌ಮಿನಾರ್ ಎಂಬ ಕಟ್ಟಡವನ್ನು ೧೫೯೧ರಲ್ಲಿ ಮಹಮ್ಮದ್ ಕ್ವೊಲಿ ಕುತುಬ್ ಸಾಹೇಬನೆಂಬವನು ಕಟ್ಟಿಸಿದನು. ಇದರ ಸಮೀಪ ನಿಜಾಮು ಸಾಗರವೆಂಬ ಕೃತಕ ಸರೋವರವಿದೆ. ಇದರ ಪಶ್ಚಿಮದಲ್ಲಿ ಗೊಲ್ಕೊಂಡವೆಂಬ ಹಳೆಯ ಸುಲ್ತಾನರ ರಾಜಧಾನಿಯು ಹಾಳು ಬಿದ್ದಿದ್ದರೂ

ಅದರ ಭದ್ರವಾದ ಕೋಟೆಯು ಗೋಡೆಗಳು ಇನ್ನೂ ನಿಂತಿವೆ. ಇಲ್ಲಿ ಔರಂಗಜೇಬನ ಸೈನ್ಯವು ಅನೇಕ ವರ್ಷಗಳ ವರೆಗೆ ಮುತ್ತಿಗೆ ಹಾಕಿ ನೆಲಸಿತ್ತು.

ಲಾಹೋರ್

ಲಾಹೋರು ನಗರವು ಭಾರತದ ಆರನೆಯ ಮಹಾನಗರವಾಗಿದೆ. ಈ ನಗರವು ಶ್ರೀ ರಾಮಚಂದ್ರನ ವಂಶಿಕರ ರಾಜ್ಯ ಶಾಸನ ಕಾಲದಲ್ಲಿ ವಿಶೇಷ ಉನ್ನತವಾಗಿತ್ತೆಂದೂ, ಶ್ರೀ ರಾಮಚಂದ್ರನ ಸುಪುತ್ರರಾದ ಲವ—ಕುಶರು ತಮ್ಮ ಹೆಸರಿನಲ್ಲಿ ಕ್ರಮಶಃ 'ಲಾಹೋರು' 'ಕುಶರ' ನಗರಗಳನ್ನು ಸ್ಥಾಪಿಸಿ ರಾಜ್ಯಭಾರ ಮಾಡುತ್ತಿದ್ದರೆಂದೂ ದಂತ ಕತೆಯಿದೆ. ಕ್ರಿ. ಶ. ಏಳನೆಯ ಶತಮಾನದ ಪ್ರಾರಂಭದಲ್ಲಿ ಬೌದ್ಧ ಧರ್ಮದ ಜಿಜ್ಞಾಸುವೂ ಚೀನಾ ದೇಶದ ಪರಿವ್ರಾಜಕನೂ ಆದ ಯೂ-ಆನ್-ಚುವಾಂಗ್ ಎಂಬವನು ತನ್ನ ಸಂಚಾರದ ವೃತ್ತಾಂತದಲ್ಲಿ ಈ ನಗರದ ಸಮೃದ್ಧಿಯ ವರ್ಣನೆಯನ್ನು ಕೊಟ್ಟಿರುವನು. ಅಜಮೀರಿನ ಚೌಹಾನ್ ರಜಪೂತರಾದ ಜಯಪಾಲ, ಅನಂಗಪಾಲ ರಾಜರ ವರೆಗೆ ಇಲ್ಲಿ ಹಿಂದುಗಳ ಪ್ರಭಾವವು ನೆಲಸಿತ್ತು. ಬಳಿಕ ಕ್ರಮವಾಗಿ ಘಜನಿಯೂ, ಘೋರಿ ವಂಶೀಯ ಮುಹಮ್ಮದ ಸುಲ್ತಾನನೂ ಪಂಜಾಬನ್ನು ಗೆದ್ದು, ಇಲ್ಲಿ ರಾಜಧಾನಿಯನ್ನು ಸ್ಥಾಪಿಸಿದರು. ಮೊಗಲರ ಶಾಸನ ಕಾಲದಲ್ಲಿ ಲಾಹೋರು ನಗರವು ಬೆಳೆದು ಬಂದು ಹಲವು ಸುಂದರವಾದ ಕಟ್ಟಡಗಳಿಂದ ಅಲಂಕರಿಸಲ್ಪಟ್ಟಿತು. ಹುಮಾಯೂನನಿಂದ ಔರಂಗಜೇಬನ ವರೆಗಿನ ದೊರೆಗಳು ಶಿಲ್ಪದ ಪರಾಕಾಷ್ಠತೆಯನ್ನು ಇಲ್ಲಿ ಪ್ರಕಟಮಾಡಿದರು. ಅವರ ಆಳ್ವಿಕೆಯ ಕಾಲವು ಲಾಹೋರು ನಗರದ ಇತಿಹಾಸದಲ್ಲಿ ಸುವರ್ಣ ಯುಗವೆನ್ನಬಹುದು. ಖಾವ್‌ಗಾಹ, ಮೋತಿ ಮಸೀದಿ, ಸಮಾಧಿ ಮಂದಿರ, ಇರಾವತೀ ನದಿಯ ದಡದಲ್ಲಿರುವ ರಾಜ ಭವನ ಇವುಗಳನ್ನು ಜಹಂಗೀರನು ಕಟ್ಟಿಸಿದನು. ಇವನಿಂದ ರಚಿಸಲ್ಪಟ್ಟ ಇಮಾದತ್‌ಖಾನಾ--ಭಜನಾಶ್ರಮವು ಲಾಹೋರಿಗೆ ಒಂದು ಭೂಷಣವಾಗಿದೆ. ಇವುಗಳಲ್ಲದೆ ನೌಲಖಾ, ಶೀಷ ಮಹಲ್ ಮುಂತಾದ ಕಟ್ಟಡಗಳು ನೋಡ ತಕ್ಕವು.

ಲಾಹೋರು ದ್ವಾರದ ಮುಂದುಗಡೆ ಒಂದು ರಸ್ತೆಯು ದಕ್ಷಿಣದ ಕಡೆಗೆ ಹೋಗಿದೆ. ಇದು ಅನಾರ್ಕಲಿ ಅಥವಾ ಸದರ್ ಬಾಜಾರ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈ ರಸ್ತೆಯು ಇಲ್ಲಿಯ ಪ್ರಸಿದ್ಧ ರಾಜ ರಸ್ತೆಯಾಗಿದೆ. ಇಲ್ಲಿಯ ಕಟ್ಟಡಗಳಲ್ಲಿ ಗಲಗರಲ್ಲಿ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾಲಯ, ಮ್ಯೂಜಿಯಂ, ಓರಿಯಂಟಲ್ ಕಾಲೇಜು ಮುಂತಾದವು ನೋಡತಕ್ಕವು. ಮೊಲ್‌ರೋಡಿನಲ್ಲಿ ನೋಡತಕ್ಕ ಹಲವು ಸರಕಾರಿ ಮತ್ತು ದೇಶೀಯ ಕಟ್ಟಡಗಳಿವೆ.

ಅಹಮ್ಮದಾಬಾದು

ಭಾರತದ ಮಹಾನಗರಗಳಲ್ಲಿ ಅಹಮ್ಮದಾಬಾದು ಏಳನೆಯದು. ಹಿಂದೆ ಇಲ್ಲಿ ಆಳುತ್ತಿದ್ದ ಅಹಮದಶಹ ಎಂಬವನಿಂದ ಈ ನಗರಕ್ಕೆ ಈ ಹೆಸರು ಬಂತು. ನಮ್ಮ ದೇಶದಲ್ಲಿ ಮುಂಬಯಿಯನ್ನು ಬಿಟ್ಟರೆ ಈ ನಗರದಲ್ಲಿರುವಷ್ಟು ಹತ್ತಿಯ ಗಿರಣಿಗಳು ಬೇರೆಲ್ಲಿಯೂ ಇಲ್ಲ. ಇಲ್ಲಿ ೧೦೦ಕ್ಕೂ ಮಿಕ್ಕಿ ಹತ್ತಿಯ ಗಿರಣಿಗಳಿವೆ. ನೂಲುವ ಮತ್ತು ಬಣ್ಣಹಾಕುವ ಕಾರಖಾನೆಗಳು ಸಾವಿರಾರು ಇವೆ.

ಈ ನಗರದ ಸುತ್ತುಮುತ್ತಲು ವಿಶಾಲವಾದ ಕರಿಮಣ್ಣಿನಲ್ಲಿ ಹತ್ತಿಯು ಬೆಳೆಯುವುದರಿಂದಲೂ, ಹಿನ್ನಾಡಿನ ಹತ್ತಿಯನ್ನು ಸಾಗಿಸಲು ರೈಲ್ವೆ ಮೊದಲಾದ ವಾಹನಗಳ ಸೌಕರ್ಯವಿರುವುದರಿಂದಲೂ, ಈ ನಗರವು ಬಟ್ಟೆಯ ಗಿರಣಿಗಳಿಗಾಗಿ ಪ್ರಸಿದ್ಧಿ ಪಡೆದಿದೆ. ಈ ನಗರವನ್ನು ಭಾರತದ ಮೆಂಚೆಸ್ಟರ್ ಎಂದು ಕರೆಯುವರು. ಈ ಊರಿನ ಸುತ್ತಲೂ ಒಂದು ಕೋಟೆ ಇತ್ತು. ಆದರೆ, ಈಗ ಆ ಕೋಟೆಯನ್ನು ಒಡೆದು ಅಲ್ಲಿ ನಗರವನ್ನು ವಿಸ್ತರಿಸುತ್ತಿದ್ದಾರೆ.

ಇಲ್ಲಿ ನೋಡಬೇಕಾದ ಹಲವು ಸ್ಥಳಗಳ ಪೈಕಿ ಹಥೀಸಿಂಗನ ದೇವಾಲಯವೆಂದು ಕರೆಯಲ್ಪಡುವ ಜೈನ ದೇವಾಲಯವು ಮುಖ್ಯವಾದದ್ದು. ಅದು ದೂರದಲ್ಲಿ ನೋಡುವಾಗ ಹಂಪೆಯ ಪದ್ಮಮಹಲಿನಂತೆ ಕಾಣುವುದು.

ಬೇಸಗೆಯಲ್ಲಿ ಇಲ್ಲಿ ತಡೆಯಲಾರದಷ್ಟು ಸೆಖೆಯೂ, ಛಳಿಗಾಲದಲ್ಲಿ ತಡೆಯಲಾರದಷ್ಟು ಛಳಿಯೂ ಇದೆ. ಸಬರಮತಿ ಎಂಬ ನದಿಯ ದಂಡೆ

ಯಲ್ಲಿ ನಗರವಿದೆ. ಗಾಂಧಿಜೀಯವರ ಸಬರಮತಿ ಆಶ್ರಮವಿದ್ದ ಸ್ಥಳವು ಇಲ್ಲಿಯೇ ಸಮೀಪದಲ್ಲಿ ಇದೆ.

ಇಲ್ಲಿಯ ಜನಸಂಖ್ಯೆಯು ಸುಮಾರು ೧೫ ಲಕ್ಷ.

ಬೆಂಗಳೂರು

ಬೆಂಗಳೂರು ನಮ್ಮ ದೇಶದ ಎಂಟನೆಯ ಮಹಾನಗರವಾಗಿಯೂ, ದಕ್ಷಿಣ ಹಿಂದುಸ್ಥಾನದ ಎರಡನೆಯ ನಗರವಾಗಿಯೂ, ಕರ್ನಾಟಕದ ಮೊದಲನೆಯ ನಗರವಾಗಿಯೂ ಇದೆ. ವಿಮಾನ ಕಾರಖಾನೆ, ಟೆಲಿಫೋನು ಕಾರಖಾನೆ ಮೊದಲಾದ ಹಲವು ಹೊಸ ಕಾರ್ಖಾನೆಗಳು ತಲೆಯೆತ್ತಿದ ಮೇಲೆ ಈ ನಗರದ ಜನಸಂಖ್ಯೆಯು ಹೆಚ್ಚುತ್ತ ಹೋಗಿ, ನಗರವು ಭರದಿಂದ ಬೆಳೆಯುತ್ತ ಬರುತ್ತಿದೆ.

೧೫೦ ಲಕ್ಷ ಪ್ರಜಾಸಂಖ್ಯೆಯುಳ್ಳ, ೬೩,೦೦೦ ಚ. ಮೈಲು ವಿಶಾಲವಾದ ಅಖಂಡ ಕರ್ನಾಟಕದಲ್ಲಿ ಇದು ಮೊದಲನೆಯ ನಗರವಾದುದರಿಂದ ಇಲ್ಲಿಂದ ಹಲವು ದೈನಿಕ, ವಾರ, ಮಾಸಪತ್ರಿಕೆಗಳು ಕನ್ನಡ ಭಾಷೆಯಲ್ಲಿ ಹೊರಡುತ್ತವೆ. ಇಲ್ಲಿ ಅತ್ಯುತ್ತಮವಾದ ವಿಹಾರೋದ್ಯಾನವೂ, ಅಠಾರಾ ಕಚೇರಿಯೇ ಮೊದಲಾದ ಹಲವು ಸರಕಾರಿ ಕಟ್ಟಡಗಳೂ, ಹೋಟೆಲುಗಳೂ, ರೂಪವಾಣಿ ಮಂದಿರಗಳೂ ನೋಡತಕ್ಕವು. ಇಲ್ಲಿ ನಮ್ಮ ದೇಶದ ವೈಜ್ಞಾನಿಕ ಶೋಧದ ಕೇಂದ್ರ ಸಂಸ್ಥೆಯೂ ಇದೆ.

ಕೈಗಾರಿಕಾ ಪ್ರಪಂಚದಲ್ಲಿ ಮೈಸೂರಿಗೊಂದು ಹಿರಿದಾದ ಸ್ಥಾನವಿದೆ. ಬೆಂಗಳೂರಿನಲ್ಲಿ ಸರಕಾರದಿಂದ ನಡೆಯಿಸಲ್ಪಡುವ ಕಾರ್ಖಾನೆಗಳು ಹಲವಿವೆ. ಮೈಸೂರು ರೇಶ್ಮೆಯು ಜಗತ್ತಿನಲ್ಲಿ ಹೆಸರಾದುದು.

ಮೈಸೂರಿನ ಮಲೆನಾಡಿನಲ್ಲಿ ಹೇರಳವಾಗಿ ದೊರೆಯುವ ಗಂಧದ ಮರವನ್ನು ಎಣ್ಣೆಗಾಗಿ ಪರವೂರಿಗೆ ಕಳುಹಿಸಿಕೊಡುತ್ತಿದ್ದರು. ೧೯೧೬ರಲ್ಲಿ ಬೆಂಗಳೂರಿನಲ್ಲಿ ಹೊಸ ಯಂತ್ರೋಪಕರಣಗಳನ್ನು ತರಿಸಿ ಗಂಧದ ಕಾರ್ಖಾನೆಯನ್ನು ತೆರೆದರು. ೧೯೧೭ರಲ್ಲಿ ಸಾಬೂನಿನ ಕಾರ್ಖಾನೆಯೊಂದು ಸ್ಥಾಪನೆಯಾಯಿತು. ರೇಶ್ಮೆಯ, ಬಟ್ಟೆಯ ಮತ್ತು ವಿಮಾನ ಕಾರ್ಖಾನೆಗಳು ನೋಡತಕ್ಕವಿವೆ.

ಲಕ್ನೋ

ಭಾರತದ ಮಹಾನಗರಗಳಲ್ಲಿ ಲಕ್ನೋ ಒಂಭತ್ತನೆಯದಾಗಿದೆ. ಮೈಸೂರಿಗೆ 'ತೋಟಗಳ ನಗರ'ವೆಂದೂ, ಕೊಯಮುತ್ತೂರಿಗೆ 'ದಕ್ಷಿಣ ಹಿಂದೂಸ್ಥಾನದ ಮೆಂಚೆಸ್ಟರ್' ಎಂದೂ ಪಾಲಿಟಾನಕ್ಕೆ 'ದೇವಾಲಯಗಳ ನಗರ'ವೆಂದೂ, ಮಂಗಳೂರಿಗೆ 'ಪೌರಾತ್ಯ ರೋಂ' ಎಂದೂ ಹೆಸರಿರುವಂತೆ ಲಕ್ನೋ ನಗರವನ್ನು 'ಅರೇಬಿಯನ್ ನೈಟ್ಸ್ ನಗರ'ವೆಂದೂ ಕರೆಯುತ್ತಾರೆ.

ಈ ನಗರವು ಗೌತಮಿ ನದಿಯ ದಕ್ಷಿಣ ದಡದಲ್ಲಿದ್ದು ಕಲ್ಕತ್ತದಿಂದ ೬೧೬ ಮೈಲೂ, ಕಾಶಿಯಿಂದ ೧೯೯ ಮೈಲೂ, ಢಿಲ್ಲಿಯಿಂದ ೩೦೩ ಮೈಲೂ, ಬೊಂಬಾಯಿಯಿಂದ ೮೮೫ ಮೈಲೂ ದೂರವಿರುವ ನಗರವಾಗಿದೆ.

ಲಕ್ನೋ ನಗರವು ಸಮುದ್ರ ಪಾತಳಿಯಿಂದ ೪೦೩ ಅಡಿ ಎತ್ತರವಾಗಿದ್ದು, ಬೇಸಗೆಯಲ್ಲಿ ಅಧಿಕವಾದ ಶಾಖವುಳ್ಳದ್ದಾಗಿಯೂ, ಛಳಿಗಾಲದಲ್ಲಿ ಅತಿ ಛಳಿಯುಳ್ಳದ್ದಾಗಿಯೂ ಇದೆ. ಇಲ್ಲಿಯ ಸರಾಸರಿ ಮಳೆಯು ೪೩ ಇಂಚು.

ಈ ಊರಿನ ಮೊದಲಿನ ಹೆಸರು ಲಕ್ಷ್ಮಣಪುರವೆಂದಾಗಿತ್ತು. ಶ್ರೀರಾಮಚಂದ್ರನ ತಮ್ಮನಾದ ಲಕ್ಷ್ಮಣನು ಈ ನಗರವನ್ನು ನಿರ್ಮಿಸಿದುದಾಗಿ ದಂತಕತೆಯಿದೆ. ೧೭೭೫ರಲ್ಲಿ ಇಲ್ಲಿ ಆಳುತ್ತಿದ್ದ ಅಸಾಫ್ ಉದ್ದೌಲನೆಂಬ ರಾಜನು ತನ್ನ ರಾಜಧಾನಿಯನ್ನು ಫಿಜಿಯಾಬಾದು ಎಂಬಲ್ಲಿಂದ ಇಲ್ಲಿಗೆ ತಂದನು. ಆ ಮೇಲೆ ಈ ಊರು ಬೆಳೆಯುತ್ತಾ ಬಂದು ದೊಡ್ಡ ನಗರವಾಯಿತು. ಅಸಾಫ್ ಉದ್ದೌಲನು ವಿಲಾಸೀರಾಜನಾಗಿದ್ದು ಇಲ್ಲಿ ದೌಲತ್ ಖಾನ್ ಅರಮನೆ, ಮಸೀದಿ, ರೂಮಿ ದಾರ್ವಾಜ, ಕುರ್ಶಿದ್ ಮಹಲ್, ಬಿಜಾಪೂರ್ ಕೋಠಿ, ಚಿನ್ನಾತ್ ಕೋಠಿ, ಚಾರ್‌ಬಾಗ್, ಎಂಬ ಹಲವು ಮಹಲುಗಳನ್ನು ಕಟ್ಟಿಸಿದನು. ಅವನು ೧೭೯೭ರಲ್ಲಿ ಸಾಯುವಾಗ ಖಜಾನೆಯು ಬರಿದಾಗಿತ್ತು. ಅವನ ನಂತರ ಪಟ್ಟಕ್ಕೆ ಬಂದ ಸಾದತ್ ಆಲಿಖಾನನೆಂಬ ರಾಜನು ಮೋತಿಮಹಲು, ದಿಲ್‌ಖುಷ್ ಅರಮನೆ, ಕುದುರೆಯ ಲಾಯ ಮೊದಲಾದುವನ್ನು ಕಟ್ಟಿಸಿದನು. ಇವನು ತನ್ನ ಆಳ್ವಿಕೆಯಲ್ಲಿ ಕಟ್ಟಿಸಿದ ಕಟ್ಟಡಗಳೆಲ್ಲಕ್ಕೂ ಖಜಾನೆಯಲ್ಲಿದ್ದ ಹಣವೆಲ್ಲವೂ ಬರಿದಾದುದರಿಂದ ೧೮೦೧ರಲ್ಲಿ ತನ್ನ ಔಂಧ ಸಂಸ್ಥಾನದ ಅರ್ಧಭಾಗವನ್ನು ಬ್ರಿಟಿಷರ

ಈಸ್ಟ್ ಇಂಡಿಯಾ ಕಂಪೆನಿಗೆ ಒತ್ತೆಮಾಡಿ ಹಣವನ್ನೊದಗಿಸಿಕೊಂಡನು. ಅವನು ತನ್ನ ಆಳ್ವಿಕೆಯ ಕಾಲದಲ್ಲಿ ಹಲವು ಸುಂದರ ಮಸೀದಿಗಳನ್ನು ಕಟ್ಟಿಸಿ ಲಕ್ನೋ ನಗರವನ್ನು ಸುಂದರವಾಗಿ ಕಾಣುವಂತೆ ಮಾಡಿ ೧೮೧೪ರಲ್ಲಿ ಸತ್ತುಹೋದನು. ಅವನು ಸಾಯುವಾಗ ಅವನ ಸಾಲವೆಲ್ಲ ತೀರಿ ಹೋಗಿ ಖಜಾನೆಯಲ್ಲಿ ೧೪ ಕೋಟಿ ದ್ರವ್ಯವು ಶೇಖರಿಸಲ್ಪಟ್ಟಿತ್ತು.

ನಾಸಿರುದ್ದೀನ ಹೈದರನೆಂಬವನಿಂದ ಕಟ್ಟಿಸಲ್ಪಟ್ಟ ಚತ್ತರ್ ಮಂಜಿಲ್ ಎಂಬ ಅರಮನೆಯು ನೋಡತಕ್ಕುದಿದೆ. ಅದರ ಗುಮ್ಮಟಗಳು ದೂರಕ್ಕೆ ಬಿಡಿಸಿದ ಕೊಡೆಗಳಂತೆ ಕಾಣುವುದರಿಂದ ಅದಕ್ಕೆ ಆ ಹೆಸರನ್ನು ಕೊಟ್ಟರು. ಅದನ್ನು ನೋಡಿಕೊಂಡು ಚಾರಿತ್ರಿಕ ಹಿನ್ನೆಲೆಯಿಂದ ಕೂಡಿದ ರೆಸಿಡೆನ್ಸಿಯನ್ನು ನೋಡಬಹುದು. ಇದನ್ನು ಸಾದತ್ ಅಲಿಖಾನನು ಬ್ರಿಟಿಷ್ ರೆಸಿಡೆಂಟರಿಗಾಗಿ ೧೮೦೦ರಲ್ಲಿ ಕಟ್ಟಿಸಿದನು. ಇದರಲ್ಲಿ ನೆಲಮಾಳಿಗೆಗಳು ಕೂಡಾ ಇವೆ.

ಮಚ್ಛಿಭವನವೆಂಬ ಮಹಲಿನ ಎಲ್ಲೆಕಟ್ಟಿನೊಳಗಿರುವ 'ಗ್ರೇಟ್ ಇಮೆಂಬ್ರಾ'ವೆಂಬದನ್ನು ಅವಶ್ಯ ನೋಡಬೇಕಾದುದು. ಇದರಲ್ಲಿ ತುಂಬಾ ಚಿತ್ರಿಕೆಗಳಿವೆ. ದೊಡ್ಡದಾದ ಮೂರು ಗುಮ್ಮಟಗಳಿಂದಲೂ, ಇಕ್ಕಡೆಗಳಲ್ಲಿರುವ ಪೊಳ್ಳು ಕಂಬಗಳಿಂದಲೂ ಇದು ಬಹುದೂರದ ವರೆಗೆ ಕಾಣಿಸುವುದು. ಈ ಮಹಲನ್ನು ಮೊಹರಂ ಮೊದಲಾದ ಪರ್ವದಿನಗಳಲ್ಲಿ ದರ್ಬಾರಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ೧೭೮೪ರಲ್ಲಿ ಬರಗಾಲ ಬಂದಾಗ ಪ್ರಜೆಗಳಿಗೆ ಕೆಲಸ ಕೊಡುವುದಕ್ಕಾಗಿ ಆ ಕಾಲದ ರಾಜನಾದ ಅಸಾಫ ಉದ್ದೌಲನು ಇದನ್ನು ಕಟ್ಟಿಸಿದನು. ಇದು ಕಲ್ಲಿನಿಂದಲೇ ಕಟ್ಟಲ್ಪಟ್ಟು ೧೬೨ ಅಡಿ ಉದ್ದ ಮತ್ತು ೫೩ ಅಡಿ ಅಗಲವಿರುವ ಕೋಣೆಯಿಂದೊಡಗೂಡಿದೆ. ಈ ಕೋಣೆಯು ಜಗತ್ತಿನಲ್ಲಿ ದೊಡ್ಡ ಅಖಂಡ ಸಭಾಭವನವೆಂದು ಎಣಿಸಲ್ಪಟ್ಟಿದೆ.

ಅಲ್ಲಿಂದ ಮುಂದೆ ರೂಮಿದರ್ವಾಜವೆಂಬ ಗೇಟನ್ನು ನೋಡಿಕೊಂಡು ವಿಕ್ಟೋರಿಯಾ ರಾಣಿಯ ನೆನಪಿಗಾಗಿ ಮಾಡಿಸಿದ ರಾಣಿಯ ಪ್ರತಿಮೆಯಿಂದೊಡಗೂಡಿದ ವಿಕ್ಟೋರಿಯಾ ಪಾರ್ಕನ್ನು ನೋಡಿಕೊಂಡು ಅದರ ಸಮೀಪವಿರುವ ದೀಪಗಳ ಅರಮನೆಯನ್ನು ನೋಡಬಹುದು. ಈ ಅರಮನೆಯ ಸಮೀಪ ಒಂದು ಗಡಿಯಾರ ಕಂಬವಿದೆ. ಈ ಗಡಿಯಾರ ಕಂಬದಲ್ಲಿರುವ ಗಡಿಯಾರವು ಹಿಂದುಸ್ಥಾನದಲ್ಲಿಯೇ ದೊಡ್ಡದೆಂದು ಹೆಸರುವಾಸಿ

ಯಾಗಿದೆ. ಇದರಲ್ಲಿ ಕಾಲು ಗಂಟೆಯನ್ನು ಸಣ್ಣ ಗಂಟೆಯಿಂದಲೂ, ಅರ್ಧವನ್ನು ಸ್ವಲ್ಪ ದೊಡ್ಡದರದಲ್ಲಿಯೂ, ಇಡೀ ತಾಸನ್ನು ಬಹುದೊಡ್ಡ ಗಂಟೆಯಿಂದಲೂ ಬಾರಿಸುವಂತೆ ಏರ್ಪಾಡು ಮಾಡಿದ್ದಾರೆ. ಇದಕ್ಕಾಗಿ ಹುಸಾನಿಯಾ ಎಂಡೋಮೆಂಟಿನಿಂದ ೧,೧೭,೦೦೦ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ದಿಲ್‌ಖುಷ್ ಅರಮನೆಯನ್ನು ನೋಡಲೇಬೇಕು. ೧೮೫೭ರಲ್ಲಿ ಸರ್ ಹೆನ್ರಿ ಹೆವ್ಲೋಕ್ ಎಂಬ ಬ್ರಿಟಿಷರವನು ಈ ಅರಮನೆಯಲ್ಲಿದ್ದ ಸೈನಿಕ ಶಿಬಿರದಲ್ಲಿ ಸತ್ತುಹೋದನು. ಹತ್ತಿರದಲ್ಲಿದ್ದ ಆಲಂಬಾಗ್ ಎಂಬಲ್ಲಿ ಅವನನ್ನು ಸಮಾಧಿಮಾಡಲಾಯಿತು.

ಈ ಅರಮನೆಯಿಂದ ಮುಕ್ಕಾಲು ಮೈಲು ದೂರದಲ್ಲಿ ಲಾಮಾರ್ಟಿನು ಕಾಲೇಜು ಇದೆ. ಇದರ ಕಟ್ಟಡಗಳು ಉಪವನಗಳಿಂದ ಸುತ್ತುವರಿಯಲ್ಪಟ್ಟು ಬಹುದೊಡ್ಡ ಗುಮಟದಿಂದ ಕೂಡಿದೆ. ಇದರ ಸಮೀಪ ಒಂದು ಕೃತಕ ಕೆರೆಯಿದ್ದು, ಆ ಕೆರೆಯ ಒಂದು ಬದಿಯಲ್ಲಿ ನೀರಿನಿಂದ ೧೨೫ ಅಡಿಗಳ ಎತ್ತರಕ್ಕೆ ತಲೆಯೆತ್ತಿ ನಿಂತಿರುವ ಸ್ತಂಭವೊಂದಿದೆ.

ಸಿಕಂದರಬಾಗ್ ಎಂಬಲ್ಲಿಯ ಉದ್ಯಾನ, ಪ್ರಾಣಿಶಾಲೆ, ಸಿಕಂದರಾಬಾಗ್ ಗೇಟು ಮತ್ತು ಮೋತೀಮಹಲು ಮೊದಲಾದುವು ಅವಶ್ಯ ನೋಡತಕ್ಕವು.

ಲಕ್ನೋ ನಗರವು ಬೆಳ್ಳಿಬಂಗಾರದ ಜರಿಯ ಕಸೂತಿ ಕೆಲಸಗಳಿಗಾಗಿಯೂ, ಮಣ್ಣಿನ ಸಣ್ಣ ದೊಡ್ಡ ಪ್ರತಿಮೆಗಳ ತಯಾರಿಕೆಗಾಗಿಯೂ ಹೆಸರಾಗಿದೆ. ದೇಶವಿಖ್ಯಾತ ಸಂಗೀತ ಕಾಲೇಜೂ ಇಲ್ಲಿದೆ.

ಅಮೃತಸರ

ಭಾರತದ ಮಹಾನಗರಗಳಲ್ಲಿ ಹತ್ತನೆಯದಾದ ಅಮೃತಸರವು ಲಾಹೋರಿನಿಂದ ೩೨ ಮೈಲುಗಳ ದೂರದಲ್ಲಿದೆ. ಹಿಂದುಗಳಿಗೆ ಕಾಶಿ, ವೃಂದಾವನ ಮುಂತಾದ ಕ್ಷೇತ್ರಗಳು ಹೇಗೆ ಪವಿತ್ರವೋ ಹಾಗೆಯೇ ಸಿಕ್ಖರಿಗೆ ಈ ಕ್ಷೇತ್ರವು ಪವಿತ್ರವಾದುದು. ೧೯೧೯ರಲ್ಲಿ ನಡೆದ ಹತ್ಯಾಕಾಂಡದ ಸ್ಥಾನವಾದ ಜಲಿಯಾನ್‌ವಾಲಾ ಉದ್ಯಾವನವು ಇರುವುದು

ಇಲ್ಲಿಯೇ. ನಾಲ್ಕೂನ್ನರು ವರ್ಷಗಳ ಕೆಳಗೆ ಇದು ಒಂದು ಚಿಕ್ಕ ಗ್ರಾಮವಾಗಿತ್ತು. ಆಗ ಇದನ್ನು 'ಬಾಜಾರ್' ಎಂದು ಕರೆಯುತ್ತಿದ್ದರು.

ಹಿಂದೆ ಅಕ್ಬರನ ಶಾಸನಕಾಲದಲ್ಲಿ ೧೫೭೪ರಲ್ಲಿ ಸಿಕ್ಖರ ನಾಲ್ಕನೆಯ ಗುರುವಾದ ರಾಮದಾಸ ಸಿಂಹನು ಇಲ್ಲಿಯ ಸರೋವರವನ್ನೂ ಇದರ ಸುತ್ತಲೂ ಚಿಕ್ಕ ಚಿಕ್ಕ ದೇವಾಲಯಗಳನ್ನೂ ನಿರ್ಮಿಸಿದನು. ಅಂದಿನಿಂದ ಇದಕ್ಕೆ ರಾಮದಾಸಪುರವೆಂಬ ಹೆಸರು ಬಂತು. [illegible] ಮೇಲೆ ರಾಮದಾಸನ ಮಗನಾದ ಅರ್ಜುನಸಿಂಹನು ಇಲ್ಲಿ ಸಿಕ್ಖರ ರಾಜಧಾನಿಯನ್ನು ಸ್ಥಾಪಿಸಿ ಇದಕ್ಕೆ ಅಮೃತಸರವೆಂದು ಹೆಸರಿಟ್ಟನು.

ಇಲ್ಲಿ ೧೮೦೯ರಲ್ಲಿ ಮಹಾರಾಜ ರಣಜಿತ್ ಸಿಂಹನು ಮಾಡಿಸಿದ ದುರ್ಗವು ಈಗಲೂ ಇದೆ. ೧೭೬೨ರಲ್ಲಿ ತೈಮೂರನು ಇಲ್ಲಿಯ ಪ್ರಧಾನ ದೇವಾಲಯವನ್ನು ನಾಶಮಾಡಿದನು. ಸಿಕ್ಖರು ಪುನಃ ಅವುಗಳನ್ನು ಕಟ್ಟಿಸಿದರು. ಬಳಿಕ ಅಹಮದಶಹನು ಬಂದು ಆ ಮಂದಿರಗಳನ್ನು ಪುನಃ ನಾಶಮಾಡಿದನು. ದೇವಸ್ಥಾನಗಳನ್ನು ನಾಶಮಾಡಿದ ಮಾತ್ರಕ್ಕೆ ಅವನ ಮನಸ್ಸು ಶಾಂತವಾಗಲಿಲ್ಲ. [illegible] ದೇವಸ್ಥಾನಗಳಲ್ಲಿ ಗೋಹತ್ಯೆಯನ್ನು ಮಾಡಿಸಿ ಅದನ್ನು ಅಪವಿತ್ರವನ್ನಾಗಿ ಮಾಡಿದನು. ಮತ್ತು ಅಮೃತಸರದಲ್ಲಿ ಅಲ್ಲಲ್ಲಿ ಮಸೀದಿಗಳನ್ನು ಕಟ್ಟಿಸಿದನು. ಆದರೆ ಅಹಮದಶಹನು ಹೊರಟುಹೋದ ಮೇಲೆ ಸಿಕ್ಖರು, ಅವನು ಕಟ್ಟಿಸಿದ ಮಸೀದಿಗಳಲ್ಲಿ ಹಂದಿಯನ್ನು ಕೊಂದು, ಅವುಗಳನ್ನು ಅಪವಿತ್ರಮಾಡಿ ಆ ಮಸೀದಿಗಳನ್ನು ಕೆಡವಿಬಿಟ್ಟರು. ಕೊನೆಗೆ ಕೊಳದ ನಡುವಿನಲ್ಲಿ ಈಗಿನ ದೇವಾಲಯವು ಕಟ್ಟಲ್ಪಟ್ಟಿತು.

ಕೊಳವು ಸದಾ ನೀರಿನಿಂದ ತುಂಬಿದ್ದು ವಿಶಾಲವಾಗಿದೆ. ಇದರ ಮಧ್ಯದಲ್ಲಿ ಸುವರ್ಣ ದೇವಾಲಯವಿದೆ. ದೇವಾಲಯದ ಏರಿಯ ಪಕ್ಕದಲ್ಲಿ 'ದುಃಖಸಂಜೀವಿನಿ' ಮರವಿದೆ. ರೋಗಪರಿಹಾರಿಣಿಯೆಂಬ ನಂಬಿಕೆಯಿಂದ ಸಹಸ್ರಾರು ಯಾತ್ರಾರ್ಥಿಗಳು [illegible] ಸರೋವರದ ಬಳಿ ಸೇರಿ ಪುಣ್ಯಸ್ನಾನ ಮಾಡುತ್ತಾರೆ. ಈ ಕೊಳದ ಸುತ್ತಲೂ ರಾಜ, ಮಂತ್ರಿ ಮೊದಲಾದವರ ಪ್ರಾಸಾದಗಳು ಶೋಭಿಸುತ್ತವೆ.

ಸ್ವರ್ಣಮಂದಿರವೆಂಬ ಸಿಕ್ಖರ ದೇವಾಲಯವನ್ನು ಸರೋವರದ ಮಧ್ಯದಲ್ಲಿ ಕಟ್ಟಿರುವರು. ಅದನ್ನು ಪೂರ್ವದಿಕ್ಕಿನಲ್ಲಿರುವ ಸೇತುವೆಯಿಂದ

ಪ್ರವೇಶಿಸಬಹುದು. ಸುತ್ತುಮುತ್ತಲಿನ ಪ್ರಾಕಾರಗಳೂ ಗೋಪುರವೂ ಅಮೃತಶಿಲೆಯಿಂದ ಕಟ್ಟಲ್ಪಟ್ಟು, ಭಿತ್ತಿಗಳೂ ಗೋಪುರಗಳೂ ಬಂಗಾರದ ಮುಲಾಮಿನ ತಗಡುಗಳಿಂದ ಹೊದಿಸಿ, ಚಿತ್ರವಿಚಿತ್ರವಾದ ಬಳ್ಳಿಗಳನ್ನು ಗೋಡೆಗಳಲ್ಲಿ ಬಿಡಿಸಿ, ಕೆಂಪು, ಪಚ್ಚೆ ಮೊದಲಾದ ನವರತ್ನಗಳನ್ನು ಜೋಡಿಸಿರುವರು.

ಸಿಕ್ಖ ಮತದವರು ಪ್ರಾರ್ಥನಾ ಮಂದಿರಕ್ಕೆ ಗುರುದ್ವಾರವೆಂದು ಸಂಬೋಧಿಸುತ್ತಾರೆ. ಇಲ್ಲಿ ಹಿಂದೂಗಳ ಪವಿತ್ರ ವೇದಗಳಿಗೆ ಸಮಾನವಾದ 'ಗ್ರಂಥ ಸಾಹೀಬ' ಎಂಬ ಗುರುಮುಖಿ ಭಾಷೆಯಲ್ಲಿ ಬರೆದ ಗ್ರಂಥವನ್ನು ಅಹೋರಾತ್ರಿ ಓದುತ್ತಾ ಇರುವರು. ಸರ್ತಿ ಪ್ರಕಾರ ಎಡೆಬಿಡದೆ ಇಪ್ಪತ್ತ ನಾಲ್ಕು ತಾಸುಗಳೂ, ವರ್ಷದ ಮುನ್ನೂರ ಅರವತ್ತೈದು ದಿವಸಗಳೂ ಗ್ರಂಥ ಸಾಹೀಬವು ಭಕ್ತರಿಗೆ ಶ್ರವಣಿಸಲ್ಪಡುತ್ತದೆ.

ಸ್ವರ್ಣ ಮಂದಿರದಲ್ಲಿ ಯಾವಾಗಲೂ ಪೂರ್ಣ ಶಾಂತತೆಯಿದ್ದು ಪ್ರಾತಃಕಾಲ ನಾಲ್ಕು ಗಂಟೆಯಿಂದ ಮಧ್ಯರಾತ್ರಿಯ ವರೆಗೆ ಪರಮಾತ್ಮನ ಸ್ತುತಿಪರ ಅಭಂಗಗಳನ್ನು ಸಂಗೀತದೊಂದಿಗೆ ಹಾಡುತ್ತಿರುತ್ತಾರೆ.

ಸಿಕ್ಖ ಮತದವರಲ್ಲಿ ಜಾತಿಮತಗಳಿಲ್ಲ. ಹಾಗಾಗಿ ಯಾವ ಮತಸ್ಥ ನಾದರೂ ತನ್ನ ಪಾದರಕ್ಷೆ, ಕಾಲುಚೀಲಗಳನ್ನು ಬಿಟ್ಟು ಸ್ವರ್ಣಮಂದಿರ ವನ್ನು ಪ್ರವೇಶಿಸಬಹುದು. ಆದರೆ ಪ್ರತಿಯೊಬ್ಬನೂ ಗಂಡಸಾಗಲೀ ಹೆಂಗ ಸಾಗಲೀ ಶಿರೋಭೂಷಣವನ್ನು ಹಾಕಿ ಪ್ರವೇಶಿಸಬೇಕು.

ದೇವಾಲಯದ ಸಿಂಹದ್ವಾರದಲ್ಲಿ ಪ್ರವೇಶಮಾಡುವಾಗ 'ಭುಂಗ' ಪ್ರಾಸಾದವು ಸಿಕ್ಕುವುದು. ಇಲ್ಲಿ ಸಿಕ್ಖರ ಅಸ್ತ್ರಶಸ್ತ್ರಗಳು ಓರಣವಾಗಿ ಇಡಲ್ಪಟ್ಟಿವೆ. ಅದನ್ನು ದಾಟಿದೊಡನೆ ಸುವರ್ಣಮಂದಿರದ ಭವ್ಯ ನೋಟವು ನೋಡಸಿಗುವುದು.

ಭಾರತದ ಚಿತ್ರದ ಅಂಚೆಯ ಚೀಟುಗಳಲ್ಲಿ ಕಲ್ಕತ್ತದ ಮೆಮೋರಿ ಯಲ್ ಹಾಲ್, ಜೈನ ಬಸದಿಗಳನ್ನೂ, ಮುಂಬಾಯಿಯ ಭಾರತದ ಹೆಬ್ಬಾಗಿಲನ್ನೂ, ಢಿಲ್ಲಿಯ ಕೆಂಪು ಕೋಟೆಯನ್ನೂ, ಅಮೃತಸರದ ಸುವರ್ಣ ದೇವಾಲಯವನ್ನೂ ಕಾಣಬಹುದು.

ಬನಾರಸ (ಕಾಶಿ)

'ವಾರಣಾಸಿ' ಎಂಬುದರ ಅಪಭ್ರಂಶವೇ ಬನಾರಸಿ ಅಥವಾ ಬನಾರಸ. ಕಲ್ಕತ್ತೆಯಿಂದ ೪೦೦ ಮೈಲುಗಳ ದೂರದಲ್ಲಿ, ಉತ್ತರ ಪ್ರದೇಶದಲ್ಲಿ, ಗಂಗಾನದಿ ತೀರದಲ್ಲಿ, ಕಾಶೀ ನಗರವು ಹರಡಿದೆ. ಭಾರತದ ಅತಿ ಪುರಾತನ ನಗರಗಳಲ್ಲಿ ಕಾಶಿಯು ಒಂದಾಗಿದ್ದು, ಪುರಾಣೇತಿಹಾಸಗಳಲ್ಲೆಲ್ಲ ಇದರ ಉಲ್ಲೇಖವಿದೆ. ಸಮಸ್ತ ಹಿಂದೂಗಳಿಗೆ ಅತ್ಯಂತ ಪವಿತ್ರ ಯಾತ್ರಾ ಕ್ಷೇತ್ರವಾಗಿರುತ್ತದೆ. ಸಾವಿರಾರು ವರ್ಷಗಳಿಂದ ಕೋಟ್ಯಾಂತರ ಜನರು ಯಾತ್ರೆಯನ್ನು ಕೈಕೊಂಡಿರುವಂಥ, ನೂರಾರು ಅರಸರು ಆಳಿದ, ಲಕ್ಷೋಪಲಕ್ಷ ವಿದ್ವನ್ಮಣಿಗಳಿಗೆ ಜನನವಿತ್ತ, ಜಗತ್ತಿನ ಸುಪ್ರಸಿದ್ಧ ಶಿಕ್ಷಣಕೇಂದ್ರಗಳಲ್ಲಿ ಅತ್ಯುಚ್ಛ ಸ್ಥಾನದಲ್ಲಿ ಮೆರೆದ ಮಹಾನಗರವಿದು. (ರಾಜಾ ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಸರ್ವಸ್ವವನ್ನೊಪ್ಪಿಸಿ, ಕೊನೆಯ ಋಣವನ್ನು ತೀರಿಸಲು ಚಾಂಡಾಲನಲ್ಲಿ ಸ್ಮಶಾನಕಾವಲಿಗೆ ನಿಂತ ಹರಿಶ್ಚಂದ್ರ ಘಾಟ್ ಇಲ್ಲಿದೆ.) ನದಿ ದಂಡೆಯಲ್ಲಿ ಮೈಲುಗಟ್ಟಲೆ ಹರಡಿದ ಈ ನಗರದಲ್ಲಿ ಅನೇಕ ರಾಜ-ಮಹಾರಾಜರುಗಳು ಕಟ್ಟಿಸಿದ ಛತ್ರಗಳಿವೆ. ಗೌಡ ಸಾರಸ್ವತ ಬ್ರಾಹ್ಮಣ ಸಮಾಜದವರಿಗೆ ಸೇರಿದ ವಿಶಾಲವಾದ ಶಿಲಾನಿರ್ಮಿತ ಶ್ರೀ ಕಾಶೀಮಠವೂ ಇಲ್ಲಿದೆ. ಶ್ರೀ ವಿಶ್ವನಾಥನ ದೇವಾಲಯವಲ್ಲದೆ ಇತರ ನೂರಾರು ಚಿಕ್ಕ ದೊಡ್ಡ ದೇವಾಲಯಗಳಿರುವುವು. ಭಾರತೀಯ ಪುರಾತನ ಸಂಸ್ಕೃತಿಯ ಸ್ವಚ್ಛ ಕುರುಹುಗಳನೇಕ, ಅಚ್ಚಳಿಯದೆ ಉಳಿದಿರುವ ಒಂದು ದೊಡ್ಡ ನಗರವೂ ಇದೇ. ವರ್ಷದ ಮಹೋತ್ಸವಗಳಲ್ಲಿ ರಾಮಲೀಲಾ, ಹೋಳಿ ಮೊದಲಾದುವು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಡುವುವು. ಪಂಡಿತ ಮದನಮೋಹನ ಮಾಲವೀಯರ ಮಹಾಯತ್ನಗಳಿಂದ ಸ್ಥಾಪಿಸಲ್ಪಟ್ಟ (೧೯೧೬) ಹಿಂದೂ ವಿಶ್ವವಿದ್ಯಾನಿಲಯವು ಈ ನಗರದ ಬಡಾವಣೆಯಲ್ಲಿದೆ. ಗಂಗಾನದಿಗೆ ೩೫೦೦ ಅಡಿ ಉದ್ದದ ಡಫರಿನ್ ಸೇತುವೆಯಿದೆ. ಕಾಶೀ ಸಂಸ್ಥಾನದ ವಿಸ್ತೀರ್ಣವು ೮೭೦ ಚದರ ಮೈಲುಗಳು. ಇದು, ಮೊದಲು ಕಾಶೀ ಮಹಾರಾಜನೆನಿಸಲ್ಪಡುವ ಅರಸನ ಆಳ್ವಿಕೆಯಲ್ಲಿದ್ದುದು. ಜನಸಂಖ್ಯೆ ಸುಮಾರು ಐದು ಲಕ್ಷ.

ಪುಣೆ

ಮಹಾರಾಷ್ಟ್ರ ಸ್ಥಾಪಕ ಶಿವಾಜಿಯ ರಾಜಧಾನಿಯಾಗಿದ್ದು, ಅವನ ನಂತರ ಪೇಷ್ವೆಗಳ ರಾಜಧಾನಿಯಾಗಿದ್ದ ಪುಣೆಯು, ಮುಂಬಯಿ ರಾಜ್ಯದಲ್ಲಿ ಎರಡನೇ ಮಹಾನಗರವಾಗಿದೆ. ಜನಸಂಖ್ಯೆ ಸುಮಾರು ಐದೂವರೆ ಲಕ್ಷ. ಮುಂಬಯಿ ನಗರದಿಂದ ೧೨೦ ಮೈಲು ದೂರದಲ್ಲಿದೆ. ಶಿಕ್ಷಣ ಸಂಸ್ಥೆಗಳಿಗೆ ಹೆಸರಾಗಿದೆ. ಶಿವಾಜಿಯು ಆರಾಧನೆ ಮಾಡುತಿದ್ದ, ಪರ್ವತೀ ದೇವಾಲಯವು ಸುಪ್ರಸಿದ್ಧವಿದೆ. ಭಾರತದ ಎಲ್ಲ ಕಡೆಗಳಿಗೆ ಹೋಗಲು ಇಲ್ಲಿಂದ ರೈಲ್ವೆ ಇದೆ. ದೊಡ್ಡ ವಿಮಾನ ನಿಲ್ದಾಣವಿದೆ. ಇಲ್ಲಿ ವರ್ಷಕ್ಕೊಮ್ಮೆ ನಡೆಯುವ ಚೌತಿಹಬ್ಬವು ಭಾರತದಲ್ಲೆಲ್ಲ ಪ್ರಸಿದ್ಧವಾದುದು.

ಮೈಸೂರು

ಅದೇ ಹೆಸರಿನ ಸಂಸ್ಥಾನದ ರಾಜಧಾನಿ. ಜನಸಂಖ್ಯೆ ಸುಮಾರು ಎರಡು ಲಕ್ಷಗಳಷ್ಟು ಇದೆ (ಮೈಸೂರು ಸಂಸ್ಥಾನವು ೨೯,೫೮೩ ಚದರ ಮೈಲು ವಿಸ್ತೀರ್ಣವಿದೆ. ಶ್ರೀಗಂಧ ತೈಲಕ್ಕೆ ಜಗತ್ಪ್ರಸಿದ್ಧದಾಗಿದೆ. ಕಾಫಿ ಬೆಳೆಯಲ್ಲಿ ಪ್ರಥಮ ಸ್ಥಾನ ಪಡೆಯುತ್ತಿದೆ. ಜಗತ್ತಿನಲ್ಲಿ ಬೆಳೆವ ಕಾಫಿಯಲ್ಲಿ ಸುಮಾರು ೫ನೇ ೧ ಪಾಲು ಕಾಫಿಯು ಮೈಸೂರು ಸಂಸ್ಥಾನದಲ್ಲಿ ಬೆಳೆವುದು. ಭಾರತದಲ್ಲಿ ಕಾಫಿಯ ಬೇಳೆ ಆರಂಭವಾದುದು ಮೈಸೂರಿಗೆ ಸೇರಿದ ಚಿಕ್ಕಮಗಳೂರಿನ ಬಳಿಯಿರುವ ಬಾಬಾಬುಡನ್‌ಗಿರಿಯಲ್ಲಿ ಎನ್ನುವರು. ಬಾಬಾಬುಡನ್‌ರವರು ಮಕ್ಕಾಯಾತ್ರೆಯಿಂದ ಮರಳುವಾಗ, ಏಳು ಕಾಫಿ ಬೀಜಗಳನ್ನು ತಂದು ಆ ಗಿರಿಯಲ್ಲಿ ಪ್ರಥಮತಃ ನೆಟ್ಟಿದರೆಂದೂ, ಅಲ್ಲಿಂದ ಇದರ ಬೆಳೆ ಹರಡಿತೆಂದೂ ಹೇಳುವರು.) ಮೈಸೂರು ನಗರವು ಅರಮನೆಗಳಿಗೂ, ಚಾಮುಂಡಿ ಬೆಟ್ಟದಲ್ಲಿರುವ ಶ್ರೀ ಚಾಮುಂಡೇಶ್ವರಿಯ ದೇವಾಲಯ ಹಾಗು ಅರಮನೆಗೂ, ರಮಣೀಯ ನೋಟಗಳಿಗೂ, ಅತಿ ಸುಂದರ ರಸ್ತೆಗಳಿಗೂ ಕಾರಂಜಿಗಳಿಗೂ, ಟೆಕ್ನೋಲೋಜಿಕಲ್ ಇನ್ಸ್ಟಿಟ್ಯೂಟ್ ಮೊದಲಾದ ಸಂಸ್ಥೆಗಳಿಗೂ, ದೇವಾಲಯಗಳಿಗೂ, ಕ್ರೈಸ್ತರಿಗೆ ಪವಿತ್ರವೆನಿಸುವ ಸೈಂಟ್ ಫಿಲೋಮಿನಾ ದೇವಾಲಯಕ್ಕೂ ಹೆಸರಾಗಿದೆ. ವರುಷಾವಧಿ ದಸರೆ ಮಹೋತ್ಸವವು ಭಾರತದಲ್ಲೆಲ್ಲ ಹೆಸರಾದುದು. ದಸರಾ ಕಾಲದಲ್ಲಿ ನಡೆವ ವಸ್ತುಪ್ರದರ್ಶನಕ್ಕೆ ಪ್ರದರ್ಶನ ಕಟ್ಟಡಗಳಿವೆ. ಜಗನ್ಮೋಹನ ಅರಮನೆ

ಯಲ್ಲಿ, ಪ್ರಸಿದ್ಧ ಭಾರತೀಯ ಹಾಗು ವಿದೇಶಿ ಕಲಾಕಾರರ ಕೃತಿಗಳಿವೆ. ರಾಜಾರವಿವರ್ಮನ ಕೆಲವು ಚಿತ್ರಗಳೂ ಈ ಅರಮನೆಯಲ್ಲಿವೆ. ನಗರದ ಲ್ಲೊಂದು ಪ್ರಾಣಿ ಪ್ರದರ್ಶನಾಲಯವಿದ್ದು, ಭಾರತದ ಇಂಥ ಪ್ರದರ್ಶನಾಲಯಗಳಲ್ಲಿ ಹೆಸರು ಹೊಂದಿದೆ. ಶ್ರೀಮನ್ಮಹಾರಾಜರು ವಾಸಿಸುವ ಲಲಿತ ಮಹಾಲ್ ಅರಮನೆಯೂ ಮನೋಹರವಿದೆ.

ಬಾನುಲಿ ಕೇಂದ್ರವಿದೆ. ಸುಂದರವಾದ, ಸೌಕರ್ಯಗಳುಳ್ಳ ರೈಲ್ವೆ ಸ್ಟೇಶನ್ ಇದೆ. ಛತ್ರಗಳೂ, ಒಳ್ಳೆಯ ಹೊಟೇಲುಗಳೂ ಇರುವುವು.

ಕೆಲವೇ ಮೈಲುಗಳ ದೂರದಲ್ಲಿ ಟಿಪ್ಪುವಿನ ರಾಜಧಾನಿ ಶ್ರೀರಂಗಪಟ್ಟಣವಿದೆ. ಕನ್ನಂಬಾಡಿ ಅಣೆಕಟ್ಟು ಮತ್ತು ಜಗತ್ಪ್ರಸಿದ್ಧ ವೃಂದಾವನವಿದೆ.

ಆಗ್ರಾ

ಜನ ಸಂಖ್ಯೆಯು ಸುಮಾರು ನಾಲ್ಕು ಲಕ್ಷದಷ್ಟಿರಬಹುದಾದರೂ ಆಗ್ರಾ ನಗರವು,'ತಾಜಮಹಲ್' ಕಟ್ಟಡದಿಂದ ಜಗತ್ತಿನ ಎಲ್ಲ ದೇಶಗಳಲ್ಲೂ ಪ್ರಸಿದ್ಧಿ ಪಡೆದಿದೆ. ಡಿಲ್ಲಿಯಿಂದ ಸುಮಾರು ೧೨೦ ಮೈಲುಗಳ ದೂರದಲ್ಲಿ, ಯಮುನಾ ನದಿಯ ತೀರದಲ್ಲಿ ಈ ನಗರವು ಬೆಳೆದುಬಂದಿದೆ. ಮೊಗಲರ ಕಾಲದಲ್ಲೇ ನಗರವು ಬಹುಮುಖವಾಗಿ ಬೆಳೆಯಿತು. ಈಗ, ದೊಡ್ಡ ವ್ಯಾಪಾರ ಕೇಂದ್ರವಾಗಿದೆ. ಧಾನ್ಯದವಸಗಳ ವ್ಯಾಪಾರವೂ, ಹತ್ತಿ ವ್ಯಾಪಾರವೂ ಚೆನ್ನಾಗಿ ನಡೆಯುತ್ತಿದೆ. ಸುಂದರ ಜಮಖಾನುಗಳಿಗೆ ಹೆಸರಾಗಿದೆ. ಕ್ರಿ.ಶ. ೧೫೬೬ರಲ್ಲಿ ಅಕ್ಬರನು ಈ ನಗರವನ್ನು ರಚಿಸಿ, ವೃದ್ಧಿಗೆ ತಂದನು. ಡಿಲ್ಲಿಯ ಕೆಂಪುಕೋಟೆಗಿಂತಲೂ ದೊಡ್ಡದಾದ ಕೋಟೆಯನ್ನು ಇಲ್ಲಿ ಕಟ್ಟಿಸಿ, ಅದರೊಳಗೆ ಮಛೀಭವನ ಮೊದಲಾದುವುಗಳನ್ನು ರಚಿಸಿದನು. ಅಕ್ಬರನ ಇತಿಹಾಸ ಪ್ರಸಿದ್ಧ 'ಮೀನಾಬಜಾರ್' ಇಲ್ಲಿ ನಡೆಯುತಿತ್ತು. ಈ ಕೋಟೆಯು ಒಂದೂವರೆ ಮೈಲು ಉದ್ದ, ೭೦ ಅಡಿ ಎತ್ತರವಿದೆ. ಒಳಗಡೆ ಸುಂದರ ಅರಮನೆಯಿದೆ. ಷಹಾಜಹಾನನು ಇಲ್ಲಿ ವಾಸವಾಗಿದ್ದನು. ಅಕ್ಬರನ ರಜಪೂತ ರಾಣಿ ಜೋಧಬಾಯಿಗೆ ಇದೇ ಅರಮನೆಯಲ್ಲಿ, ಹಿಂದೂ ರೀತಿಯ ಶಿಲ್ಪದಲ್ಲಿ ಪ್ರತ್ಯೇಕ ರಾಣೀವಾಸ ಕಟ್ಟಿಸಿ ಕೊಡಲ್ಪಟ್ಟಿತ್ತು. ಈ ಅರಮನೆಯಲ್ಲಿ,ಷಹಾಜಹಾನನನ್ನು ಅವರಂಗಜೇಬನು ಬಂಧಿಸಿದ, ಷಹಾಜಹಾನನ ಅಂತ್ಯವಾದ ಕೊಠಡಿಯಿದೆ. ಮತ್ತು ಆ ಕೊಠಡಿಯ 'ಗೆಲರಿ'ಯಿಂದ, ಯಮುನಾ ನದಿ

ದಂಡೆಯ ಮೇಲೆ, ಷಹಾಜನನು ತನ್ನ ರಾಣಿ ಮುಮ್ತಾಜಳಿಗಾಗಿ ಕಟ್ಟಿಸಿದ 'ತಾಜಮಹಾಲಿ'ನ ಸುಂದರ ದೃಶ್ಯವಿದೆ. ತಾಜಮಹಾಲ್ ಹಾಗು ಅದರ ಇತಿಹಾಸವನ್ನಂತೂ, ಇತಿಹಾಸದ ಪ್ರತಿಯೋರ್ವ ವಿದ್ಯಾರ್ಥಿಯು ಚೆನ್ನಾಗಿ ಬಲ್ಲನು. ನಗರದಲ್ಲಿ ಎರಡು ಸುಂದರ ಮಸೀದಿಗಳೂ, ಸುಮಾರು ಹದಿನೆಂಟು ಮೈಲು ದೂರದಲ್ಲಿ, ಅಕ್ಬರನು ರಚಿಸಲು ತೊಡಗಿ ಬಿಟ್ಟುಕೊಟ್ಟ ಫತ್ತೆಪುರಸಿಕ್ರಿಯ ಅವಶೇಷಗಳೂ ಇವೆ.

ಮಧುರಾ

ಮದರಾಸು ರಾಜ್ಯದಲ್ಲಿ, ಮಧುರಾ ಪಟ್ಟಣವು ಎರಡನೆಯ ಸ್ಥಾನ ಪಡೆಯುತ್ತದೆ; ಮದರಾಸು ನಗರದಿಂದ ರೈಲ್ವೆದಾರಿಯಾಗಿ ೨೭೦ ಮೈಲುಗಳ ದೂರದಲ್ಲಿ, ವೈಗಾಯಿ ನದಿ ದಂಡೆಯಲ್ಲಿದೆ. ಶ್ರೀ ಮೀನಾಕ್ಷಿ ದೇವಾಲಯವೂ ತಿರುಮಲ ನಾಯಕ್ ಅರಸನ ಅರಮನೆಯೂ, ಪ್ರವಾಸಿಯು ಮುಖ್ಯವಾಗಿ ನೋಡತಕ್ಕುವು. ನೂಲು ಮತ್ತು ಬಟ್ಟೆಗಳ ಹಾಗು ಸೀರೆಗಳ ತಯಾರಿಗೆ ಪ್ರಸಿದ್ಧವಾದ ಸ್ಥಳ.

ಭಾರತದ ಇತರ ಕೆಲವು ಪ್ರೇಕ್ಷಣೀಯ ಸ್ಥಳಗಳು

೧. ಗ್ವಾಲಿಯರ್

ಗ್ವಾಲಿಯರ ಕೋಟೆಯು, ಭಾರತದ ಹಳೇ ಕೋಟೆಗಳಲ್ಲೊಂದಾಗಿದೆ. ಇದನ್ನು ಸುಮಾರು ೧೪೦೦ ವರ್ಷಗಳ ಹಿಂದೆ ಕಟ್ಟಿಸಿದರು. ಮುನ್ನೂರು ಅಡಿ ಎತ್ತರದ ಬೆಟ್ಟದ ಮೇಲೆ ಇದನ್ನು ಕಟ್ಟಿಸಿರುವರು. ಕೋಟೆಯೊಳಗೆ ಐದು ಅರಮನೆಗಳಿವೆ. ಅವುಗಳಲ್ಲೊಂದನ್ನು, ರಾಜಾ ಮಾನಸಿಂಹನು, ಕ್ರಿ. ಶ. ೧೪೮೬ರಲ್ಲಿ ಕಟ್ಟಿಸಿದನು.

೨. ಅಜಾಂತ

ಎರಡು ಸಾವಿರ ವರ್ಷಗಳ ಹಿಂದಿನ ಭಾರತೀಯ ಪುರಾತನ ಚಿತ್ರಕಲೆಯನ್ನು ದಾಖಲು ಮಾಡಿರುವ ಅಂಜಾಂತ ಗುಹೆಗಳು, ಜಲಗಾಂವದಿಂದ ೩೭ ಮೈಲು ದೂರವಿರುವ ಗಿರಿಕಂದರದಲ್ಲಿವೆ. ಚಿತ್ರಕಲೆಯಲ್ಲಿ, ವಿಶಿಷ್ಟ ಸ್ಥಾನ ಹೊಂದಿರುವ—ಇಂದಿನ ಹಲವು ಚಿತ್ರಕಾರರಿಗೆ ಪ್ರೇರಕ ಶಕ್ತಿಯಾಗಿರುವ ಅತ್ಯಪೂರ್ವ ಕಲಾ ಕೃತಿಗಳು ಆ ಗುಹೆಗಳಲ್ಲಿವೆ. ಬೌದ್ಧಕಾಲೀನ ಚರಿತ್ರವನ್ನೇ ಇವು ದಾಖಲು ಮಾಡಿರುವುವು. ಸಾಮಾನ್ಯ ಪ್ರಜೆಯಿಂದ ಅರಸರ

ವರೆಗೆ—ವಿವಿಧ ವರ್ಗಗಳವರ ದಿನನಿತ್ಯದ ಜೀವನವನ್ನೂ ಆ ಚಿತ್ರಗಳು ವಿಶದೀಕರಿಸುತ್ತಿವೆ.

೩. ಸಾಂಚಿ

ಭೋಪಾಲದಿಂದ ೨೮ ಮೈಲುಗಳ ದೂರದಲ್ಲಿ, ಪುರಾತನ ಭಾರತದ ಶಿಲ್ಪಕಲೆಯ ಅವಶೇಷಗಳಿವೆ. ಎರಡೂವರೆ ಸಾವಿರ ವರ್ಷಗಳ ಹಿಂದಿನ ಶಿಲ್ಪವೂ, ಕ್ರಿ. ಶ. ಹನ್ನೆರಡನೇ ಶತಮಾನದ ವರೆಗೆ ರಚಿಸಲ್ಪಟ್ಟ ಮತೆ ಕೆಲವು ಕಟ್ಟಡಗಳೂ ಅಲ್ಲಿದ್ದು, ಅವುಗಳಲ್ಲಿ ಸಾಂಚಿಯ ಸ್ತೂಪವೆಂದು ಪ್ರಸಿದ್ಧವಾದ ಮಹಾಸ್ತೂಪವು ಇಂದಿಗೂ ಅಚ್ಚಳಿಯದೆ ಇದೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಸುಂದರ 'ತೋರಣ'ಗಳಿದ್ದು, ಅವುಗಳ ಮೇಲೆ 'ಜಾತಕಕಥೆ'ಗಳ ಚಿತ್ರಗಳೂ, ಬುದ್ಧನ ಜೀವನವೂ ಕೆತ್ತಲ್ಪಟ್ಟಿವೆ.

೪. ಬಿಜಾಪುರ

ಕ್ರಿ. ಶ. ಹದಿನಾರನೇ ಶತಮಾನದಲ್ಲಿ ವೈಭವದ ತುಟ್ಟತುದಿಗೇರಿ, ಹದಿನೇಳನೇ ಶತಮಾನದಲ್ಲಿ (ಕ್ರಿ. ಶ. ೧೬೮೬) ಔರಂಗಜೇಬನ ವಶವಾಗಿ ಕೊನೆಗೊಂಡ ಬಿಜಾಪುರದಲ್ಲಿ ಕೆಲವು ಅಪೂರ್ವ ಶಿಲ್ಪಕೃತಿಗಳಿವೆ. ಮಹಮ್ಮದ ಆದಿಲಶಹನ ಗೋರಿಯ ಗುಮ್ಮಟವು ಜಗತ್ತಿನ ಗುಮ್ಮಟಗಳಲ್ಲೆಲ್ಲ ದೊಡ್ಡದು. ಮಹಮ್ಮದ ಆದಿಲಶಹನ ತಂದೆಯ ಗೋರಿ 'ಇಬ್ರಾಹಿಮ್ ರೌಝಾ', ಭಾರತದಲ್ಲಿನ ಇಂಥ ಸುಂದರ ಕಟ್ಟಡಗಳಲ್ಲೊಂದಾಗಿದೆ.

೫. ಎಲ್ಲೋರ

ಅಜಾಂತದಿಂದ ಸುಮಾರು ಆರುವತ್ತು ಮೈಲು ದೂರವಿರುವ ಗುಹೆಗಳು ಬೌದ್ಧರ, ಜೈನರ, ಬ್ರಾಹ್ಮಣರ ಶಿಲ್ಪಕಲೆಗೆ ಹೆಸರಾದುದು. ಕೈಲಾಸ ದೇವಾಲಯವು ಅತ್ಯಪೂರ್ವ ಕೆತ್ತನೆಯ ಕೆಲಸಕ್ಕೆ ಹೆಸರಾಗಿದೆ.

೬. ಫತ್ತೆಪುರ ಸಿಕ್ರಿ

ಮೊಗಲ್ ಚಕ್ರವರ್ತಿ ಅಕ್ಬರನಿಗೆ ಜಹಾಂಗೀರನು ಜನಿಸುತ್ತಲೇ, ಅಕ್ಬರನು ತನ್ನ ಯಶಸ್ಸಿನ ಸ್ಮಾರಕವಾಗಿ ಎಂಬಂತೆ ರಚಿಸಿದ ಫತ್ತೆಪುರ ಸಿಕ್ರಿಯು ಆಗ್ರಕ್ಕೆ ತೀರ ಸಮೀಪದಲ್ಲಿದೆ. ಇಲ್ಲಿ ಅಕ್ಬರನು ಹೆಚ್ಚು ಕಾಲ ನಿಲ್ಲಲಿಲ್ಲ. ಇಲ್ಲಿಯ ಕೋಟೆಯ ದ್ವಾರ 'ಪಂಚಮಹಾಲ್'—ಅತಿ ಸುಂದರ ಶಿಲ್ಪಗಳಾಗಿವೆ.

Edited, Printed and Published by K. V. Shenoy
at The Prabhat Printers, Ltd., Mangalore-1.